ವರದಿ ತರಿಸಲು ನಿರ್ದೇಶಕರಿಗೆ ತಿಳಿಸಿದ್ದಾರೆ. ಇದಕ್ಕಾಗಿ ಅವರಿಗೆ ಧನ್ಯವಾದಗಳು. ಆದಷ್ಟು ಬೇಗನೆ ನಿರ್ದೇಶಕರಿಂದ ವರದಿ ತರಿಸಿ ಇಂಡಿಯಲ್ಲಿ ಒಂದು ಸ್ವತಂತ್ರ ಕೃಷಿ ಮಾರುಕಟ್ಟೆ ಸ್ಥಾಪಿಸಲು ಅವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ಆಯಿತು.

ಚಾಮರಾಜನಗರದಲ್ಲಿರುವ ಎ.ಪಿ.ಎಂ.ಸಿ. ಯಲ್ಲಿ ಅರಿಶಿನ ಮಾರುಕಟ್ಟೆ ಪ್ರಾರಂಭಿಸುವುದು

64 (753) ಶ್ರೀ ಪುಟ್ಟರಂಗಶೆಟ್ಟಿ (ಚಾಮರಾಜನಗರ) : ಮಾನ್ಯ ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಾಮರಾಜನಗರದಲ್ಲಿ ಇರುವ ಎ.ಪಿ.ಎಂ.ಸಿ. ಯಲ್ಲಿ ಅರಿಶಿನ ಮಾರುಕಟ್ಟೆ ಪ್ರಾರಂಭಿಸಲು ಕಳೆದ 2009–2010ನೇ ಸಾಲಿನ ಆಯವ್ಯಯದಲ್ಲಿ ಒದಗಿಸಲಾಗಿದ್ದ ಹಣ ಎಷ್ಟು; ಅದರಲ್ಲಿ ಎಷ್ಟು ಬಿಡುಗಡೆಯಾಗಿದೆ, ಬಿಡುಗಡೆಯಾಗದಿದ್ದರೆ ಕಾರಣವೇನು?

ಶ್ರೀ ಶಿವರಾಜ್ ಎಸ್ ತಂಗಡಗಿ (ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು) :

ಅ) 2009–10ನೇ ಸಾಲಿನ ಆರ್.ಕೆ.ವಿ.ವೈ ಯೋಜನೆಯಡಿ ಚಾಮರಾಜನಗರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಲ್ಲಿ ಅರಸಿನ ಮಾರುಕಟ್ಟೆ ಪ್ರಾರಂಭಿಸುವ ಸಲುವಾಗಿ ರೂ.100.00 ಲಕ್ಷಗಳ ಯೋಜನೆಗೆ ಸರ್ಕಾರವು ಅನುಮೋದನೆ ನೀಡಿದೆ ಹಾಗೂ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

ಶ್ರೀ ಪುಟ್ಟರಂಗಶೆಟ್ಟಿ : ಕಳೆದ ಆಯವ್ಯಯದಲ್ಲಿ ಸುಮಾರು 100 ಕೋಟಿ ವೆಚ್ಚದಲ್ಲಿ ಚಾಮರಾಜನಗರ ಎಪಿಎಂಸಿ ಯಲ್ಲಿ ಅರಿಶಿನ ಮಾರುಕಟ್ಟೆ ಮತ್ತು ಶೈತ್ಯಗಾರ ಪ್ರಾರಂಭಿಸಲಿಕ್ಕೆ ಇಟ್ಟಿತ್ತು. ಆದರೆ ಅನುದಾನ ಬಿಡುಗಡೆ ಮಾಡಿಲ್ಲ ಎಂದು ನನ್ನ ಗಮನಕ್ಕೆ ಬಂದಿದೆ. ಅಲ್ಲಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿಯಲ್ಲಿ ಬಿಡುಗಡೆಯಾಗಿರುವ ಒಂದು ಕೋಟಿ ರೂಪಾಯಿ ವೆಚ್ಚದಲ್ಲಿ ಈಗ ಕೃಷಿ ಮಾರುಕಟ್ಟೆಯ ಕಾಮಗಾರಿ ನಡೆಯುತ್ತಿದ್ದು ಬಜೆಟ್‌ನಲ್ಲಿ

ಇಟ್ಟಿರುವ ಅನುದಾನ ಬಿಡುಗಡೆಯಾಗಿಲ್ಲ. ಆದರೆ ಉತ್ತರದಲ್ಲಿ ಬಿಡುಗಡೆಯಾಗಿದೆ ಎಂದು ತಿಳಿಸಿದ್ದಾರೆ.

ಶ್ರೀ ಶಿವರಾಜ್ ಎಸ್. ತಂಗಡಗಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ ಹಾಗೆ ಅಲ್ಲಿ ಅರಿಶಿನ ಮಾರುಕಟ್ಟೆ ಮಾಡಬೇಕೆಂದು 10 ಕೋಟಿ ರೂಪಾಯಿಯನ್ನು ಮೀಸಲಿಟ್ಟಿತ್ತು. 100 ಕೋಟಿ ರೂಪಾಯಿ ಅಲ್ಲ. ಈಗ ಒಂದು ಕೋಟಿ ರೂಪಾಯಿಯನ್ನು ಬಿಡುಗಡೆಗೊಳಿಸಿ ಕಾಮಗಾರಿ ಪ್ರಾರಂಭಿಸಿದ್ದೇವೆ. ಅದು RKVY ಇರಬಹುದು, NHM ಇರಬಹುದು, ಒಟ್ಟು ಸರ್ಕಾರ ಯೋಜನೆಗೆ ದುಡ್ಡನ್ನು ಬಿಡುಗಡೆ ಮಾಡಿದ್ದು ಹಂತ ಹಂತವಾಗಿ ಉಳಿದ 9 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿ ಚಾಮರಾಜ ನಗರದಲ್ಲಿ ಅರಿಶಿನ ಮಾರುಕಟ್ಟೆ ಮತ್ತು ಹಳೆಯ ಮಾರುಕಟ್ಟೆ ಮಾಡಬೇಕೆನ್ನುವ ನಿರ್ಧಾರವನ್ನು ತೆಗೆದುಕೊಂಡಿದ್ದೇವೆ. ಇದನ್ನು ಹಂತ ಹಂತವಾಗಿ ಮಾಡಿ ಆ ಮಾರುಕಟ್ಟೆ ಅಭಿವೃದ್ಧಿ ಮಾಡುವಂತ ಕೆಲಸ ಮಾಡುತ್ತೇವೆಂದು ತಿಳಿಸಲಿಚ್ಛಿಸುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : 10 ಕೋಟಿ ನಿಗದಿಗೊಳಿಸಿ 1 ಕೋಟಿ ಬಿಡುಗಡೆ ಮಾಡಿದ್ದೇವೆಂದರೆ ಅದರ ಅರ್ಥ ಏನು ನೀವೇ ಹೇಳಿ. ನಿಮ್ಮ performance budget ನಲ್ಲಿ after ATR ನಲ್ಲಿ ನೀವು ಕೊಟ್ಟಿದ್ದೀರಿ. 1 ಕೋಟಿ ಬಿಡುಗಡೆ ಮಾಡಿದಿರಿ. ಇದ್ಯಾಕೆ ಹೀಗೆ ಮಾಡುತ್ತೀರಿ? ಇದು ನನಗೆ ಅರ್ಥವಾಗುತ್ತಿಲ್ಲ. ಬಜೆಟ್‌ನಲ್ಲಿ ಮಾತ್ರ 10–10 ಕೋಟಿ ಎಂದು ಹೇಳಿ ಏನು ಚಪ್ಪಾಳೆ ಹೊಡೆಸಿಕೊಂಡಿದ್ದೇ ಹೊಡಿಸಿಕೊಂಡಿದ್ದು. ಬಿಡುಗಡೆ ಮಾಡುವಾಗ ಈ ತರಹ ಮಾಡುತ್ತೀರಿ. ಈ ರೀತಿ ಮಾಡುವುದರಿಂದ ಜನಗಳಿಗೆ ಆಯವ್ಯಯದ ಮೇಲೆ ನಂಬಿಕೆ ಹೋಗಿದೆ ಎಂದಿಟ್ಟುಕೊಳ್ಳಿ, ನಂಬಿಕೆ ಹೋಗುತ್ತದೆ ಇನ್ನೂ ಹೋಗುತ್ತದೆ. ತೀರಾ ಹಾಳು ಮಾಡುವುದು ಬೇಡ. ನೀವು ಕೊನೆ ಪಕ್ಷ 50 to 60% ಬಿಡುಗಡೆ ಮಾಡಲಿಲ್ಲ ಎಂದರೆ ಏನು ಪ್ರಯೋಜನ? ಅರಿಶಿನ ಮಾರುಕಟ್ಟೆ ಎನ್ನುವುದು ವಿಶೇಷ. ರಾಜ್ಯದಲ್ಲಿ ವಿಶಿಷ್ಟವಾಗಿರತಕ್ಕಂಥದ್ದು. ಅದು ಮಾರುಕಟ್ಟೆ ಎಂದಲ್ಲ ಅಂತರಾಷ್ಟ್ರೀಯ ಮಾರುಕಟ್ಟೆಯನ್ನು ಆಕರ್ಷಿಸುವಂಥ ಅರಿಸಿನ ಮಾರುಕಟ್ಟೆ ಇದೆ. ಅದರ ಇತಿಹಾಸ ದೊಡ್ಡದಿದೆ. ಅಂಥದ್ದಕ್ಕೂ ಬರಿ 1 ಕೋಟಿ ಬಿಡುಗಡೆ ಮಾಡಿದ್ದೇವೆಂದರೆ, ಮಾರ್ಚಿನೊಳಗೆ ಏನು ಮಾಡುತ್ತಾರೋ ದೇವರಿಗೆ ಗೊತ್ತು. ಒಂದು ಕೋಟಿಯಲ್ಲಿ 50 ಲಕ್ಷ ಬಿಡುಗಡೆ ಆಗಿದೆ. State level clearance

committee ನಲ್ಲಿ ಒಂದು ಕೋಟಿ ಮಾರುಕಟ್ಟೆಗೆ ಮಂಜೂರಾಗಿದ್ದು 50 ಲಕ್ಷ ಬಿಡುಗಡೆ ಮಾಡಿದಿರಿ. ನೀವು ಕೊಟ್ಟಿರುವ ವರದಿಯಲ್ಲಿ 50 ಲಕ್ಷ ಬಿಡುಗಡೆ ಮಾಡಿದಿರಿ.

ಶ್ರೀ ಶಿವರಾಜ್ ಎಸ್. ತಂಗಡಗಿ : ನಾವು ಇಲ್ಲಿ ದುಡ್ಡು ಬಿಡುಗಡೆ ಮಾಡಿದ್ದೇವೆ. ಒಂದು ಕೋಟಿ ರೂಪಾಯಿ ಕಾಮಗಾರಿ ನಡೆಯುತ್ತಿದೆ.

ಶ್ರೀ ಟಿ.ಬಿ.ಜಯಚಂದ್ರ : ಹೋಗಲಿ ಎಷ್ಟು ಖರ್ಚು ಆಗಿದೆ ಹೇಳಿ ಬಿಡಿ. ಖರ್ಚು ಸೊನ್ನೆ ಅಲ್ಲವೆ?

ಶ್ರೀ ಶಿವರಾಜ್ ಎಸ್. ತಂಗಡಗಿ : ಕಾಮಗಾರಿ ಪ್ರಾರಂಭವಾಗಿದೆ, ಕಾಮಗಾರಿ ಮುಗಿದ ಮೇಲೆ ದುಡ್ಡು ಬಿಡುಗಡೆ ಮಾಡುತ್ತೇವೆ.

ಶ್ರೀ ಟಿ.ಬಿ. ಜಯಚಂದ್ರ : ಕಾಮಗಾರಿ ಪ್ರಾರಂಭವಾಗಿದೆ ಎನ್ನುವುದನ್ನು ಒಪ್ಪುತ್ತೇನೆ. ಖರ್ಚು ಎಷ್ಟು ಆಗಿದೆ ಹೇಳಿ.

ಶ್ರೀ ಶಿವರಾಜ್ ಎಸ್. ತಂಗಡಗಿ : ಒಂದು ಕೋಟಿ ರೂಪಾಯಿ ಕಾಮಗಾರಿ ಪ್ರಾರಂಭಿಸಿದ್ದೇವೆ. ಉಳಿದ 9 ಕೋಟಿ ರೂಪಾಯಿಯ ಕಾಮಗಾರಿಯ ಕೆಲಸ ಏನೇನು ಮಾಡಬೇಕೆನ್ನುವ ವರದಿ ತರಿಸಿಕೊಂಡು ಟೆಂಡರ್ ಕರೆಯುವ ಮೂಲಕ ಮಾಡಿಸುತ್ತೇವೆ.

ಶ್ರೀ ಟಿ.ಬಿ. ಜಯಚಂದ್ರ : ಆಯವ್ಯಯ ಎಂದರೆ ಹಣ ಮಂಜೂರಾತಿಯಾಗಬೇಕು ಮತ್ತು ಖರ್ಚಾಗಬೇಕು ಎನ್ನುವುದು ಅದರ ಉದ್ದೇಶ.

ಶ್ರೀ ಶಿವರಾಜ್ ಎಸ್. ತಂಗಡಗಿ : ಬಜೆಟ್‌ನಲ್ಲಿ ಆದ ಮೇಲೆ ನಮ್ಮ ಇಲಾಖೆಗೆ ಹೋಗಬೇಕೋ ತೋಟಗಾರಿಕೆ ಇಲಾಖೆಗೆ ಹೋಗಬೇಕು ಎನ್ನುವ confusion ಆಗಿದ್ದರಿಂದ ಟೆಂಡರ್ ಕರೆಯುವ ಪ್ರಕ್ರಿಯೆ ತಡವಾಯಿತು. ನಮ್ಮ ಇಲಾಖೆಗೆ ಬಂದ ಮೇಲೆ ನಾವು ತಕ್ಷಣ ಟೆಂಡರ್ ಕರೆಯುವಂಥ ಕೆಲಸ ಮಾಡಿದ್ದೇವೆ. ಹೀಗಾಗಿ ಉಳಿದ 9 ಕೋಟಿ ರೂಪಾಯಿಗೂ ಟೆಂಡರ್ ಕರೆದು ಕಾಮಗಾರಿಯನ್ನು ಮಾಡಿಸುತ್ತೇವೆ.

ಅಧ್ಯಕ್ಷರು : ಸುನೀಲ್ ಹೆಗಡೆಯವರು ಇಲ್ಲ. ಎ.ಎಸ್. ಪಾಟೀಲ್ ರವರೆ ತಮ್ಮ ಪ್ರಶ್ನೆಗೆ ಸಮಯ ಕೇಳಿದ್ದಾರೆ, ಹೀಗಾಗಿ ಮುಂದಿನ ವಾರ ತೆಗೆದುಕೊಳ್ಳೋಣ. ಮುಂದಿನ ವಾರ ಕೊಡಿಸುತ್ತೇವೆ. ದಿನಕರ್ ಶೆಟ್ಟಿಯವರು..

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ) : ಅಲ್ಲಿರುವಂಥ ಕಾರ್ಮಿಕರು ಆಸ್ಪತ್ರೆಯಲ್ಲಿದ್ದಾರೆ. ನೀವು ಎರಡು ವಾರ ಅಂದರೆ ಅಲ್ಲಿ ಕಷ್ಟವಾಗುತ್ತದೆ.

ಅಧ್ಯಕ್ಷರು : ಎರಡು ವಾರ ಅಲ್ಲ ಮುಂದಿನ ವಾರ ಕೊಡಿಸುತೇನೆ.

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ) : 19 ನೇ ತಾರೀಕಿನೊಳಗೆ ಉತ್ತರ ಕೊಡಿಸಿ.

ಕೇಂದ್ರ ಸರ್ಕಾರದಿಂದ ರಾಜ್ಯಗಳಿಗೆ ಮುಕ್ತ ಮಾರುಕಟ್ಟೆ ಸರಬರಾಜು ಯೋಜನೆ ಕುರಿತು

68 (1004) ಶ್ರೀ ಹ್ಯಾರೀಸ್ ಎನ್.ಎ. (ಶಾಂತಿನಗರ) : ಮಾನ್ಯ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರ ಜಾರಿಗೊಳಿಸಿದ ಕಡಿಮೆ ಬೆಲೆಯಲ್ಲಿ ಅಕ್ಕಿ ಗೋಧಿ ವಿತರಣೆ ಯೋಜನೆಯ ವಿವರಗಳೇನು;

ಆ) ಯೋಜನೆಯ ಅನುಷ್ಠಾನದ ನಂತರ ಎಷ್ಟು ಪ್ರಮಾಣದ ಅಕ್ಕಿ ಮತ್ತು ಗೋಧಿಯನ್ನು ಬಳಕೆದಾರರಿಗೆ ವಿತರಿಸಲಾಗಿದೆ;

ಇ) ಮಾರುಕಟ್ಟೆ ಬೆಲೆಗಿಂತ ಕಡಿಮೆ ಬೆಲೆಯಲ್ಲಿ ಆಹಾರ ಧಾನ್ಯಗಳನ್ನು ಎಪಿಎಲ್ ಕಾರ್ಡುದಾರರು ಸೇರಿದಂತ ಎಲ್ಲಾ ಬಳಕೆದಾರರಿಗೂ ಹಂಚಿಕೆ ಮಾಡುವ ಸರ್ಕಾರದ ಯೋಜನೆಯ ವಿವರಗಳೇನು?

ಶ್ರೀ ಹೆಚ್. ಹಾಲಪ್ಪ (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು) :

ಅ) ಸಾರ್ವಜನಿಕ ವಿತರಣಾ ಪದ್ಧತಿಯಡಿಯಲ್ಲಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ರಿಯಾಯಿತಿ ದರದಲ್ಲಿ ಪಡಿತರವನ್ನು ನೀಡಲು ಎರಡು ಯೋಜನೆಗಳಿದ್ದು ಅತ್ಯಂತ ಕಡು ಬಡವರಿಗೆ ಕೇಂದ್ರ ಸರ್ಕಾರದ ಅಂತ್ಯೋದಯ ಅನ್ನ ಯೋಜನೆಯಡಿಯಲ್ಲಿ ಪ್ರತಿ ಕುಟುಂಬಕ್ಕೆ ರೂ. 3.00 ಪ್ರತಿ ಕೆಜಿ ಯಂತೆ 29 ಕೆಜಿ ಅಕ್ಕಿ ಹಾಗೂ ರೂ.2.00 ಪ್ರತಿ ಕೆಜಿ ಯಂತೆ 6 ಕೆಜಿ ಗೋಧಿಯನ್ನು ವಿತರಿಸಲಾಗುತ್ತಿದೆ. ಬಿ.ಪಿ.ಎಲ್. ಕುಟುಂಬಗಳಿಗೆ ಯುನಿಟ್ ಪದ್ಧತಿಯಡಿಯಲ್ಲಿ ಪ್ರತಿ ಯುನಿಟ್‌ಗೆ ತಲಾ 4 ಕೆಜಿ ಅಕ್ಕಿ ಹಾಗೂ 1 ಕೆಜಿ ಗೋಧಿಯಂತೆ ಗರಿಷ್ಟ ಒಂದು ಕುಟುಂಬಕ್ಕೆ ರೂ.3.00 ಪ್ರತಿ ಕೆಜಿ ಯಂತೆ 20 ಕೆಜಿ ಅಕ್ಕಿ ಹಾಗೂ ರೂ.3.00 ಪ್ರತಿ ಕೆಜಿ ಯಂತೆ 3 ಕೆಜಿ ಗೋಧಿಯನ್ನು ವಿತರಿಸಲಾಗುತ್ತಿದೆ.

ಹಾಗೆಯೇ ಬೆಲೆ ಏರಿಕೆಯನ್ನು ನಿಯಂತ್ರಣದಲ್ಲಿಡಲು ಎ.ಪಿ.ಎಲ್ ಪಡಿತರ ಚೀಟಿದಾರರಿಗೂ ಸಹಾ ಪ್ರತಿ ಕುಟುಂಬಕ್ಕೆ ತಲಾ 10 ಕೆಜಿ ಅಕ್ಕಿ